ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 305 ಡಿಸಿಇ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:21-11-2014.

## ಅಧಿಸೂಚನೆ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡುವ ಸಂದರ್ಭದಲ್ಲಿ ಮೀಸಲಾತಿ ನೀತಿ ಅನ್ವಯಿಸುವ ಕುರಿತು ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:28744/2010 ಯು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಯುಕ್ತ ಗ್ರೇಡ್-1 ಪ್ರಾಂಶುಪಾಲರ ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವಾಗದ ಕಾರಣ ತಾತ್ಕಾಲಿಕವಾಗಿ ಪ್ರಾದೇಶಿಕ ಜಂಟಿ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಈ ಕೆಳಕಂಡ ಗ್ರೇಡ್-1 ಪ್ರಾಂಶುಪಾಲರುಗಳಿಗೆ ನೀಡಲಾಗಿತ್ತು.

| ಕ್ರ. ಸಂ. | ಹೆಸರು | ಜಂಟಿ ನಿರ್ದೇಶಕರಾಗಿ ಹೆಚ್ಚುವರಿ ಪ್ರಭಾರ ದಲ್ಲಿರಿಸಿರುವ ಸ್ಥಳ |
|---|---|---|
| 1 | ಶ್ರೀ ವಿವೇಕಾನಂದ ಸಿ.ಎಂ | ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ |
| 2 | ಶ್ರೀ ಹೇಮಂತ್ ಮಲ್ಲಪ್ಪ ಭೂತನಾಳ್ | ಪ್ರಾದೇಶಿಕ ಜಂಟಿ ನಿರ್ದೇಶಕರು, ಗುಲ್ಬರ್ಗಾ |
| 3 | ಶ್ರೀ ಮಹೇಶ್ವರಪ್ಪ ಸಿ.ಕೆ. | ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು |
| 4 | ಶ್ರೀಮತಿ ಲಲಿತಮ್ಮ ಬಿ | ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು |
| 5 | ಶ್ರೀ ಸಿದ್ಧರಾಮ | ಪ್ರಾದೇಶಿಕ ಜಂಟಿ ನಿರ್ದೇಶಕರು, ಮಂಗಳೂರು |
| 6 | ಶ್ರೀ ನಾಯಕ್ ಮಾನಸಿಂಗ್ ಕೇಶವ್ | ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ |

ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:28744/2010 ರಲ್ಲಿ ದಿನಾಂಕ: 14-08-2014 ರಂದು ನೀಡಿದ ತೀರ್ಪಿನಲ್ಲಿ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವಾಗ ಮೀಸಲಾತಿಯನ್ನು ಅನ್ವಯಿಸದೇ ಉಪನ್ಯಾಸಕರ ಜ್ಯೇಷ್ಠತೆಯ ಆಧಾರದ ಮೇರೆಗೆ ಸ್ಥಳನಿಯುಕ್ತಿ ಮುಖಾಂತರ ಭರ್ತಿ ಮಾಡುವಂತೆ ತೀರ್ಪು ನೀಡಿದ ಹಿನ್ನೆಲೆಯಲ್ಲಿ ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಯೋಗ್ಯ ಪ್ರಕರಣವಲ್ಲವೆಂದು ತೀರ್ಮಾನಿಸಿ ತೀರ್ಪನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಜಂಟಿ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೇಲ್ಕಂಡ 06 ಗ್ರೇಡ್-1 ಪ್ರಾಂಶುಪಾಲರನ್ನು ತಾತ್ಕಾಲಿಕವಾಗಿ ಪ್ರಾದೇಶಿಕ ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಹೆಚ್ಚುವರಿಯಾಗಿ ಪ್ರಭಾರದಲ್ಲಿರಿಸಿರುವ ಅಧಿಸೂಚನೆ/ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು, ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯನ್ವಯ ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಗ್ರೇಡ್-1 ಪ್ರಾಂಶುಪಾಲರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ

[illegible] ಪ್ರಾಂಶುಪಾಲರು ಗ್ರೇಡ್-1 ಹುದ್ದೆಯೊಂದಿಗೆ ತಾತ್ಕಾಲಿಕವಾಗಿ ಕೇಂದ್ರ ಕಛೇರಿ ಪ್ರಾದೇಶಿಕ ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ.

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಹೆಚ್ಚುವರಿ ಪ್ರಭಾರದಲ್ಲಿರಿಸಿರುವ ಸ್ಥಳ |
|---|---|---|
| 01 | ದೇಗೌಡ ಶ್ರೀಶೈಲ್ ಬಸಗೌಡ. ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಅಥಣಿ | ಕಾಲೇಜು ಶಿಕ್ಷಣ ಇಲಾಖೆ. ಕೇಂದ್ರ ಕಛೇರಿ. ಬೆಂಗಳೂರು ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 02 | ರೂಪ್‌ರಾಜ್ ಚಂದನ್. ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಮಹಿಳಾ ಕಾಲೇಜು. ಹಾಸನ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಮೈಸೂರು ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 03 | ನಟರಾಜು. ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಟಿ.ನರಸೀಪುರ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಶಿವಮೊಗ್ಗ ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 04 | ರವಿಕುಮಾರ್ ಕೆ.ಆರ್. ಗ್ರೇಡ್-1 ಪ್ರಾಂಶುಪಾಲರು. ಮಹಾರಾಣಿ ಮಹಿಳಾ ಕಲಾ. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು. ಬೆಂಗಳೂರು | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಬೆಂಗಳೂರು ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 05 | ಘೋರ್ಪಡೆ ವಿ.ವಿ. ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಸವದತ್ತಿ. | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಧಾರವಾಡ ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 06 | ಪಾಟೀಲ್ ಬಿ.ಎ., ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಅಳ್ನಾವರ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಮಂಗಳೂರು ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |
| 07 | ಖೋತ ಎಸ್.ಎಸ್. ಗ್ರೇಡ್-1 ಪ್ರಾಂಶುಪಾಲರು. ಸರ್ಕಾರಿ ಮಹಿಳಾ ಕಾಲೇಜು. ಬೈಲಹೊಂಗಲ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ. ಗುಲ್ಬರ್ಗಾ ಇಲ್ಲಿ ಖಾಲಿ ಇರುವ ಜಂಟಿ ನಿರ್ದೇಶಕರ ಹುದ್ದೆಗೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಶೇಖರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ).
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

---

**ಸಂಖ್ಯೆ: ಕಾಶಿಇ 86 ಪ್ರಭಾರ 2011-12 ವ&ನಿ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,**
**ಬೆಂಗಳೂರು, ದಿನಾಂಕ:22-11-2014**

ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಈ ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.

1. ಕಾಲೇಜು ಶಿಕ್ಷಣ ಇಲಾಖೆ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು-ತುರ್ತು ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು
3. ಸಂಬಂಧಪಟ್ಟ ಗ್ರೇಡ್-1 ಪ್ರಾಂಶುಪಾಲರು-ತುರ್ತು ಕ್ರಮಕ್ಕಾಗಿ

*movement (Skumar)*

4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು-560 001.
5. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-560 001.

**ಆಂತರಿಕ:**

1. ಎಲ್ಲಾ ವಿಭಾಗಗಳ ಮ್ಯಾನೇಜರ್/ಅಧೀಕ್ಷಕರುಗಳು
2. ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳು
3. ರಕ್ಷಾ ಕಡತ.
4. ಕಛೇರಿ ಪ್ರತಿ

ಕಾಲೇಜು ಶಿಕ್ಷಣ ಮುಖ್ಯ ಆಡಳತಾಧಿಕಾರಿ.

22/11

*movement (Skumar)*